**ದಿನಾಂಕಃ 24.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ವಾದಿ ಪರ ಶ್ರೀ ಜಿ ಎಂ ಪಿ ವಕೀಲರಿಂದಃ**

ನಾನು ಈರಾಜಮ್ಮನ ಪರವಾಗಿ ಸಾಮಾನ್ಯ ಅಧಿಕಾರ ಪತ್ರ ನಾಮಧಾರನಾಗಿ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಸಾಕ್ಷಿ ನುಡಿಯಲು ಬಂದಿರುತ್ತೇನೆ. ಈರಾಜಮ್ಮರವರನ್ನು ಮದುವೆ ಆದಾಗ ಅವರ ತಂದೆ ವೀರಬಸಪ್ಪ ಇರಲಿಲ್ಲ, ಮರಣ ಹೊಂದಿರುತ್ತಾರೆ. ಅವರು 1962 ರಲ್ಲಿ ಮರಣ ಹೊಂದಿರುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಪಕ್ಕಾ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ವೀರಭದ್ರಪ್ಪ ಇವರು ವೀರಬಸಪ್ಪನ ಸಹೋದರ ಅಂದರೆ ಸರಿ.

ವೀರಭದ್ರಪ್ಪ ಮತ್ತು ವೀರಬಸಪ್ಪ ರವರ ನಡುವೆ ಅವರ ತಂದೆ ವೀರಪ್ಪನಿಂದ ಪ್ರಾಪ್ತವಾದ ಆಸ್ತಿಗಳ ಹಿಸ್ಸೆಗೆ ಸಂಬಂಧಪಟ್ಟಂತೆ ಯಾವುದೇ ವಿವಾದ ಇರಲಿಲ್ಲ ಅಂದರೆ ಸರಿ. ಅದೇ ರೀತಿ ವಾದಿಯ ತಂದೆ ಲೋಕಪ್ಪ ಮತ್ತು ಈರಾಜಮ್ಮ ರವರ ತಂದೆ ವೀರಬಸಪ್ಪ ವೀರಪ್ಪನಿಂದ ಪ್ರಾಪ್ತವಾದ ಆಸ್ತಿಗಳ ಹಿಸ್ಸೆಗೆ ಸಂಬಂಧಪಟ್ಟಂತೆ ಯಾವುದೇ ವಿವಾದ ಇರಲಿಲ್ಲ ಅಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವೀರಭದ್ರಪ್ಪನವರು ವಾದಿಯ ತಂದೆ ಲೋಕಪ್ಪರವರಿಗೆ ದಿಃ 07.05.1962 ರಲ್ಲಿ ಬರೆದುಕೊಟ್ಟ ವ್ಯವಸ್ಥಾ ಪತ್ರ ಈಗಲೂ ಕೂಡ ಅಸ್ತಿತ್ವದಲ್ಲಿದೆ ಅಂದರೆ ನನಗೆ ಗೊತ್ತಿಲ್ಲ. ಮೃತ ಈರಾಜಮ್ಮ ರವರು ದಿಃ 07.05.1962 ರಲ್ಲಿ ಆದಂತಹ ವ್ಯವಸ್ಥಾ ಪತ್ರವನ್ನು ಸಿಂಧುತ್ವವನ್ನು ಎಲ್ಲಿಯೂ ಕೂಡ ಪ್ರಶ್ನೆ ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಅವರ ಮಕ್ಕಳು ಸಹ ಸದರಿ ವ್ಯವಸ್ಥಾ ಪತ್ರದ ಸಿಂಧುತ್ವ ವನ್ನು ಪ್ರಶ್ನೆ ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ಮಾವ ವೀರಬಸಪ್ಪ ರವರು ಸಹ ಅವರ ಜೀವಿತಾವಧಿಯಲ್ಲಿ ಸದರಿ ವ್ಯವಸ್ಥಾ ಪತ್ರದ ಸಿಂಧುತ್ವದ ಬಗ್ಗೆ ಪ್ರಶ್ನೆ ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ದಿಃ 07.02.1962 ರಲ್ಲಿ ಆದಂತಹ ವ್ಯವಸ್ಥಾ ಪತ್ರ ಯತಾವತ್ತಾಗಿ ಚಲಾವಣೆಗೆ ಬಂದಿರುತ್ತದೆ ಅಂದರೆ ನನಗೆ ಗೊತ್ತಿಲ್ಲ.ದಾವಾ ಸ್ವತ್ತಿಗೆ ಸೇರಿಕೊಂಡು ಎಲ್ಲಾ ಸ್ವತ್ತುಗಳು ವಾದಿಯ ತಂದೆ ಲೋಕಪ್ಪ ರವರು ಮಾಲೀಕರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ ಅಂದರೆ ಸಾಕ್ಷಿಯು ದಾವಾ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿಗಳಿಗೆ ಮಾಲೀಕರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ ಎಂದು ಉತ್ತರಿಸುತ್ತಾರೆ. ಲೋಕಪ್ಪರವರ ಹೆಂಡತಿ ಮತ್ತು ಮಕ್ಕಳು ನಡುವೆ ದಾವಾ ಸ್ವತ್ತುಗಳನ್ನು ಸೇರಿದಂತೆ

ಲೋಕಪ್ಪನಿಂದ ಪ್ರಾಪ್ತವಾದ ಎಲ್ಲಾ ಆಸ್ತಿಗಳಿಗೆ ಸಂಬಂಧಿಸಿದಂತೆ ಅಸಲು ದಾವಾ ನಂ.13/2016 ದಿಃ 31.05.2017 ರಂದು ನಿಪಿ–19 ರಂತೆ ರಾಜಿ ಡಿಕ್ರಿಯಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನಿಪಿ–19 ರಾಜಿ ಡಿಕ್ರಿಯನ್ನು ಇವತ್ತಿನವರೆಗೂ ನಾನು ನೋಡಿರುವುದಿಲ್ಲ. ಆ ರೀತಿ ಆದಂತಹ ರಾಜಿ ಡಿಕ್ರಿಯಲ್ಲಿ ದಾವಾ ಶೆಡ್ಯೂಲ್ ಸ್ವತ್ತು 1 ಮತ್ತು 2 ನೇ ವಾದಿಯವರು ಸಮಭಾಗವಾಗಿ ಹಂಚಿಕೊಂಡಿರುತ್ತಾರೆ ಅಂದರೆ ಸಾಕ್ಷಿಯು ಉಳಿದ ಎಲ್ಲಾ ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ, ಆದರೆ ದಾವಾ ಅಸ್ತಿಯು ನಮ್ಮ ಸ್ವಾಧೀನದಲ್ಲಿದೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು 1 ಮತ್ತು 2 ನೇ ವಾದಿಯವರಿಗೆ ಸಮ ಅರ್ಧ ಭಾಗದಂತೆ 1 ಚತುರ್ಗಡಿ ಒಳಗೊಂಡಂತೆ ಸಂಪೂರ್ಣ ಸ್ವತ್ತು ಎಂದರೆ ಸಾಕ್ಷಿಯು ಅವರು ಏನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು ನಾನು ವಿವಾದ ಮಾಡುತ್ತಾ ಇರುವುದರಿಂದ ಈಗಲೂ ಸಹ ವೀರಬಸಪ್ಪ ರವರ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿರುತ್ತದೆ ಅಂದರೆಸಾಕ್ಷಿಯು ಅದು ನಮ್ಮ ಸ್ವಾಧೀನದಲ್ಲಿದೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತು ವಾದಿಯ ಸ್ವಾಧೀನದಲ್ಲಿದ್ದು, ಅನಾವಶ್ಯಕವಾಗಿ ಅವರಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದೀರಿ ಅಂದರೆ ಸರಿಯಲ್ಲ. ದಾವಾ ಸ್ವತ್ತು ವೀರಬಸಪ್ಪನವರ ಹೆಸರಿಗೆ ಖಾತೆ ಮುಂದುವರೆದು ಬಂದಿರುವುದರಿಂದ ನನ್ನದು ಎಂದು ಸುಳ್ಳು ಸಾಧನೆ ಮಾಡುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**